# ಷಿಲ್ಲಾಂಗ್ ಪ್ರೀತಿ; ಭೂಕಂಪನ ಭೀತಿ..!

ನಾನು, ಮಕ್ಕಳು ಮಲಗಿದ್ದಾಗ ಮಧ್ಯ ರಾತ್ರಿ ಮನೆಯ ಪಾತ್ರೆ, ಗೋಡೆಯ ಮೇಲಿನ ಫೋಟೋಗಳೆಲ್ಲ ಕೆಳಕ್ಕೆ ಬಿದ್ದು ಗಾಬರಿಯಾಯತು. ಬಾಗಿಲು ತೆಗೆಯಲು ಹೋದಾಗ ಮಕ್ಕಳ ಮೇಲೆ ಮನೆ ಬಿದ್ದರೆ? ಅಥವಾ ನನ್ನ ಮೇಲೆ ಬಿದ್ದು ಮಕ್ಕಳು ಉಳಿದರೆ? ಯಾರೂ ಅನಾಥರಾಗುವುದು ಬೇಡ, ಹೋದರೆ ಒಟ್ಟಿಗೇ ಪ್ರಾಣ ಹೋಗಲಿ ಎಂದು ಮಕ್ಕಳನ್ನು ತಬ್ಬಿ ಮಲಗಿದೆ.

★ ಎ.ಆರ್. ಅನ್ನಪೂರ್ಣ



ನಮ್ಮ ಮದುವೆ 1975ರಲ್ಲಾದ ನಂತರ ಸುಮಾರು ಹತ್ತು ವರ್ಷ ಬೆಂಗಳೂರು ಮೈಸೂರಿಗೆ ಓಡಾಡಿದ್ದೇ ಆಯಿತು. ಗಂಡ, ಹೆಂಡತಿ, ಮಕ್ಕಳು ಒಂದೆಡೆ ಇರಲಾರದಂತಹ ಸ್ಥಿತಿ. ನನ್ನ ಆಫೀಸು ಮೈಸೂರು, ನನ್ನವರದು ಬೆಂಗಳೂರು. ಒಂದೆಡೆಗೆ ವರ್ಗಾವಣೆಗೆ ಪ್ರಯತ್ನಿಸೋಕ್ಕೆ ಕರ್ನಾಟಕದಲ್ಲಿ ಅವಕಾಶವಿರಲಿಲ್ಲ. ಇಬ್ಬರೂ ಕೇಂದ್ರ ಸರ್ಕಾರಿ ನೌಕರರು. ಹಾಗಾಗಿ ನಾವೇ ಸ್ವಇಚ್ಛೆಯಿಂದ ಮೇಘಾಲಯದ ರಾಜಧಾನಿ ಷಿಲ್ಲಾಂಗಿಗೆ ವರ್ಗ ಮಾಡಿಸಿಕೊಂಡು 1985ರ ಮೇ ತಿಂಗಳಲ್ಲಿ ಹೋದೆವು.

ಕರ್ನಾಟಕದಿಂದ ಹೊರಗಡೆ ವಾಸ ಮಾಡಲು ಹೋಗುತ್ತಿದ್ದುದು ಮೊದಲನೇ ಬಾರಿ. ಅಲ್ಲಿ ಖಾಸಿ ಬುಡಕಟ್ಟು ಜನ, ಅಸ್ಸಾಮ್ ಮತ್ತು ಕೋಲ್ಕತ್ತಾದ ಬಂಗಾಳಿಗಳು ಜಾಸ್ತಿ ಇದ್ದಾರೆ ಎಂದು ತಿಳಿದಿತ್ತು. ಈ ಯಾವ ಭಾಷೆಯೂ ನಮಗೆ ಬರುತ್ತಿರಲಿಲ್ಲ. ಇಂಗ್ಲಿಷ್ ಹಾಗೂ ಅಲ್ಪ ಸ್ವಲ್ಪ ಹಿಂದಿ ಬರುತ್ತಿತ್ತು. ಷಿಲ್ಲಾಂಗಿನಲ್ಲಿ ನೆಲೆಸಿದ್ದ ಕೆಲವು ಕನ್ನಡ ಕುಟುಂಬದ ಸದಸ್ಯರೆಲ್ಲ ಆಗಾಗ್ಗೆ ಭೇಟಿಯಾಗುತ್ತಿದ್ದೆವು. ಒಟ್ಟಿಗೇ ಗೌರಿ, ಗಣೇಶನ ಹಬ್ಬ, ಕರ್ನಾಟಕ ರಾಜ್ಯೋತ್ಸವ ಎಲ್ಲ ಆಚರಿಸುತ್ತಿದ್ದೆವು. ಆದರೆ ಪ್ರತಿವಾರವೂ ತಪ್ಪದೆ ಭೇಟಿಯಾಗುತ್ತಿದ್ದ ಮನೆ ಅಂದರೆ ಕನ್ನಡದ ಪ್ರಖ್ಯಾತಿ ಕವಿ ಪು.ತಿ.ನ. ಅವರ ಮಗಳು ಶಾಂತ ಹಾಗೂ ಅಳಿಯ ರಂಗಚಾರ್ ಅವರ ಮನೆ. ಮನೆ ತುಂಬ ಜನ, ಮನಸ್ಸು ತುಂಬ ವಿಶ್ವಾಸ, ಕರ್ನಾಟಕದವರಿಗಷ್ಟೇ ಅಲ್ಲ, ಯಾವ ರಾಜ್ಯದವರೇ ಆಗಲಿ ಎಲ್ಲರಿಗೂ ಅವರ ಮನೆ ತೌರುಮನೆ.

ಇತ್ತೀಚೆಗೆ ಬೆಂಗಳೂರು ಹಾಗೂ ಸುತ್ತ ಮುತ್ತ ಆದ ಸಣ್ಣ ಪ್ರಮಾಣದ ಭೂಕಂಪನಕ್ಕೆ ಜನ ಆತಂಕಪಟ್ಟಿದ್ದನ್ನು ಕಂಡ ಮನಸ್ಸು ಆ ದಿನಗಳ ಹಿಂದೆ ಓಡಿತ್ತು. ಮೇಘಾಲಯ ಎಂದರೆ ಭೂಕಂಪನಕ್ಕೆ ಎತ್ತಿದ ಕೈ. ಮೊದಮೊದಲು ಆಫೀಸಿನಲ್ಲಿ ಏನೋ ಬರೆಯುತ್ತಿರುವಾಗ ಕೈ ನಡುಗುವುದು, ಪೆನ್ನು ಕೆಳಗೆ ಬಿದ್ದಾಗ, ನಮಗೆ ಏನೋ ಕಾಯಿಲೆ ಬಂದಿದೆಯೋ ಎಂದು ಹೆದರಿದ್ದೆ. ಆದರೆ ಸಹೋದ್ಯೋಗಿಗಳು ನನ್ನೆಡೆಗೆ ನೋಡಿ ನಗುತ್ತಾ `ದೀದೀ ಡರೋ ಮಥ್, ಕುಚ್ ನಹಿ ಹೋಗಾ' ಎಂದು ಹೇಳಿ ಇದು ಇಲ್ಲಿ ಯಾವಾಗಲೂ ಘಟಿಸುವ ಸಣ್ಣ ಭೂಕಂಪನ ಎಂದಾಗ ನನಗೂ ಧೈರ್ಯ ಬಂತು. ಆದರೆ ಅಲ್ಲಿ ಮನೆಗಳೆಲ್ಲ ಮರಗಳಿಂದ ನಿರ್ಮಾಣವಾಗಿದ್ದುದರಿಂದ ಅಪಾಯ ಹೆಚ್ಚು ತಟ್ಟುತ್ತಿರಲಿಲ್ಲ.

ಒಂದು ಬಾರಿ ನನ್ನವರು ಆಫೀಸಿನ ಕೆಲಸದ ಮೇಲೆ ಯಾವುದೋ ಕಾಡಿನಲ್ಲಿದ್ದರು. ನಾನು, ಮಕ್ಕಳು ಮಲಗಿದ್ದಾಗ ಮಧ್ಯ ರಾತ್ರಿ ಮನೆಯ ಪಾತ್ರೆ, ಗೋಡೆಯ ಮೇಲಿನ ಫೋಟೋಗಳೆಲ್ಲ ಕೆಳಕ್ಕೆ ಬಿದ್ದು ಗಾಬರಿಯಾಯತು. ಬಾಗಿಲು ತೆಗೆಯಲು ಹೋದಾಗ ಮಕ್ಕಳ ಮೇಲೆ ಮನೆ ಬಿದ್ದರೆ? ಅಥವಾ ನನ್ನ ಮೇಲೆ ಬಿದ್ದು ಮಕ್ಕಳು ಉಳಿದರೆ? ಯಾರೂ ಅನಾಥರಾಗುವುದು ಬೇಡ, ಹೋದರೆ ಒಟ್ಟಿಗೇ ಪ್ರಾಣ ಹೋಗಲಿ ಎಂದು ಮಕ್ಕಳನ್ನು ತಬ್ಬಿ ಮಲಗಿದೆ. ಕೆಲವೇ ಕ್ಷಣಗಳಲ್ಲಿ ಭೂಕಂಪನ ನಿಂತ ಮೇಲೆ ಹೊರಕ್ಕೆ ಬಂದೆವು. ಮತ್ತೊಮ್ಮೆ ಭೂಕುಸಿತವಾದಾಗ ಬೆಟ್ಟದ ಮೇಲಿಂದ ಮನೆಗಳು ಕುಸಿದು ನೆಲಕ್ಕೆ ಬಂದದ್ದು ನೋಡಿದೆವು. ನಮಗೋ ಆಶ್ಚರ್ಯ. ಮನೆ ಯಾವ ರೀತಿ ಇತ್ತೋ ಅದೇ ರೀತಿ ಕೆಳಗಿಳಿದಿತ್ತು. ಇದು ಅಲ್ಲಿ ಸರ್ವಸಾಮಾನ್ಯ ದೃಶ್ಯ.

ಷಿಲ್ಲಾಂಗನ್ನು `ಸ್ಕಾಟ್ಲ್ಯಾಂಡ್ ಆಫ್ ಈಸ್ಟ್' ಎನ್ನುವುದುಂಟು. ಅಷ್ಟು ಪ್ರಕೃತಿ ಸೌಂದರ್ಯ ತುಂಬಿದೆ. ಇನ್ನು ಸೆಪ್ಟೆಂಬರ್‌ನಿಂದ ಫೆಬ್ರವರಿ ತನಕ ಸಂಜೆ 4.30ಕ್ಕೆ ಕತ್ತಲು. ಆಫೀಸಿನಿಂದ ಬರುವಾಗ ಥೇಟ್ ಬಾಣಂತಿಯರೇ ಎಲ್ಲರೂ. ತಲೆಗೆ ಸ್ಕರ್ಫ್, ಸ್ವೆಟರ್ ಮೇಲೆ ಶಾಲು, ಕೆಲವು ವೇಳೆ ಕೈಗೆ ಗ್ಲೌಸ್, ಕಾಲಿಗೆ ಸಾಕ್ಸ್, ಕಿವಿಗೆ ಹತ್ತಿ, ಜೊತೆಗೆ ಕತ್ತಲು ಎಂದು ಕೈನಲ್ಲಿ ಟಾರ್ಚ್ ಹಿಡಿದು ಮನೆಗೆ ಬರುತ್ತಿದ್ದೆ. ಅಷ್ಟಾದರೂ ಒಬ್ಬಳೇ ಆ ಕತ್ತಲಲ್ಲಿ ಬರಬೇಕಲ್ಲ ಎಂಬ ಭಯ ಮಾತ್ರ ಇರಲಿಲ್ಲ. ಕಾರಣ ಹೆಣ್ಣು ಮಕ್ಕಳನ್ನು ಯಾರೂ ಕಣ್ಣೆತ್ತಿಯೂ ನೋಡದಂತಹ ವಾತಾವರಣ. ಹೆಂಗಸರಿಗೆ ಗೌರವ ಎನ್ನಿ. ಹೆಂಗಸರ ಜೊತೆ ಹೋದರೆ ಗಂಡಸರಿಗೆ `ಸೇಫ್. ಅಲ್ಲಿ ಮಹಿಳೆಯರದ್ದೇ ಸಾಮ್ರಾಜ್ಯ.

ನಾನು ಮೆಲುಕು ಹಾಕುತ್ತಿರುವ ಈ ಘಟನೆಗಳೆಲ್ಲ ಸುಮಾರು 30 ವರ್ಷಗಳ ಹಿಂದಿನ ಮಾತು. ಆಗ ಮೊಬೈಲ್ ಇರಲಿಲ್ಲ, ಫೋನ್ ಕೂಡ ಮೊದಲೇ ಬುಕ್ ಮಾಡಿ ಕನೆಕ್ಷನ್ ಸಿಕ್ಕಾಗ ಮಾತನಾಡಬೇಕಿತ್ತು. ಇಂಥ ಸಂದರ್ಭದಲ್ಲಿ ಇದ್ದಕ್ಕಿದ್ದಂತೆ ಟೆಲಿಗ್ರಾಂ ಬಂದರೆ? ಟೆಲಿಗ್ರಾಂ ಪಡೆಯಲು ಕೈ ನಡುಗುತ್ತಿತ್ತು. ಕಾರಣ ಆ ದಿನಗಳಲ್ಲಿ ತುಂಬ ಮುಖ್ಯವಾದ ಶುಭ, ಅಶುಭ ಸಂದರ್ಭದಲ್ಲಿ ಮಾತ್ರ ಟೆಲಿಗ್ರಾಂ ಬರುತ್ತಿದ್ದುದು. ಮೊದಲಿಗೆ ಅಶುಭದ ಹೆದರಿಕೆಯೆ ತಾನೆ? ಕಷ್ಟಪಟ್ಟು ಟೆಲಿಗ್ರಾಂ ಒಡೆದು ನೋಡಿ ಮೂಕವಿಸ್ಮಿತಳಾದೆ. ಕಾರಣ ಮೈಸೂರಿನಿಂದ ಸ.ರ. ಸುದರ್ಶನ್ ಅವರು ನನ್ನ ಪತಿ ಬರೆದ 'ಹಿಮದ ಸಾಮ್ರಾಜ್ಯದಲ್ಲಿ' ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಪುಸ್ತಕ ಬಹುಮಾನ ಸಂದಿದೆ, ಅಭಿನಂದನೆಗಳು ಎಂದು ತಿಳಿಸಿದ್ದರು. ಅದೂ ಮೊದಲ ಬಾರಿಗೆ ಬಂದ ಪ್ರಶಸ್ತಿಯಾದ್ದರಿಂದ ಜೀವನದಲ್ಲಿ ಮರೆಯಲಾಗದ ಸವಿನೆನಪಾಗಿ ಷಿಲ್ಲಾಂಗ್ ನನ್ನ ಮನದಲ್ಲಿ ನಿಂತಿದೆ.

ಇನ್ನು ಆಫೀಸಿನಲ್ಲೂ ಸಹೋದ್ಯೋಗಿಗಳೆಲ್ಲ ಖಾಸಿ ಬುಡಕಟ್ಟಿನವರ ಜೊತೆಗೆ ಅಸ್ಸಾಂ, ಪಶ್ಚಿಮ ಬಂಗಾಳ, ಬಿಹಾರ್ ಹೀಗೆ ಭಾರತದ ಎಲ್ಲ ಮೂಲೆಗಳಿಂದ ಬಂದವರು. ಮೊದಮೊದಲು ನನಗೂ ಸ್ವಲ್ಪ ಗೊಂದಲವಾಯ್ತು. ಬುಡಕಟ್ಟಿನವರಾದರೂ ಎಲ್ಲರಿಗೂ ಮಾತನಾಡಲು ಇಂಗ್ಲಿಷ್ ಬರುತ್ತಿತ್ತು, ಜೊತೆಗೆ ಹಿಂದಿಯಲ್ಲಿ ಮಾತನಾಡಲು ನಾನೂ ಕಲಿತೆ. ಆ ಮೂರು ವರ್ಷಗಳನ್ನು ಮರೆಯಲು ಸಾಧ್ಯವೇ ಇಲ್ಲ. ನನ್ನ ಸಹೋದ್ಯೋಗಿಗಳೊಡನೆ ಇರುವ ಈ ಫೋಟೊ ನೋಡಿದಾಗ ನನಗನ್ನಿಸುವುದು 'ಭಾಷೆ ಯಾವುದಾದರೇನು, ಹೃದಯದ ಭಾಷೆ ಒಂದೇ ತಾನೆ?'